ಹೇಳುತ್ತಿದ್ದಾರೆ. ಅದೇನೆಂದರೆ, ನಾವು ಸಾಯುವವರೆಗೂ ಸಾಮ್ ಮಾಡುವುದೇ ಆಯಿತು, ಇನ್ನು ಕುಸ್ತಿ ಮಾಡುವುದು ಯಾವಾಗ ಅಂತ ಕೇಳುತ್ತಾರೆ. ಆದ್ದರಿಂದ ಇದು ಸ್ವಲ್ಪ ವಯಂದುವರಿಯುವುದಕ್ಕೆ ಅವಕಾಶ ಮಾಡಿ ಕೊಡಿ ಎಂದು ತಮ್ಮ ಮೂಲಕ ಮಾನ್ಯ ಮಂತ್ರಿಗಳನ್ನು ಕೇಳುತ್ತೇನೆ.

ಶ್ರೀ ಎಸ್. ಎಂ. ಯಾಹ್ಯಾ.—ಮಾನ್ಯ ಸದಸ್ಯರು ಕೂಡ್ಲಿಗಿ ತಾಲ್ಲೂಕು ಹಿಂದುಳಿದ ತಾಲ್ಲೂಕು ಆಗಿದ್ದು, ಅಲ್ಲಿ ರೂರಲ್ ಎಲೆಕ್ಟ್ರಿಫಿಕೇಷನ್ ಸ್ಕೀಮು ಜಾರಿಯಲ್ಲಿದೆ ಎಂದು ಅವರೇ ಹೇಳಿದ್ದಾರೆ. ಆ ಸ್ಕೀಮಿನ ಪ್ರಕಾರ ೫ ವರ್ಷಗಳಲ್ಲಿ ಆ ಕೆಲಸ ಮಾಡಬೇಕು. ಆ ೫ ವರ್ಷಗಳಲ್ಲಿ ಆ ಕೆಲಸ ಆಗಿಯೇ ಆಗುತ್ತದೆ. ಅದಕ್ಕಿಂತ ಬೇಗ ಮಾಡುವಂತೆ ಮಾನ್ಯ ಸದಸ್ಯರು ಹೇಳಿದ್ದಾರೆ. ೫ ವರ್ಷಗಳಲ್ಲಿ ಆ ಕೆಲಸ ಮುಗಿದರೆ ದೊಡ್ಡದು. ಆದರೂ ಮಾನ್ಯ ಸದಸ್ಯರ ಇಚ್ಛೆಯಂತೆ ಅದಕ್ಕಿಂತ ಬೇಗನೆ ಮುಗಿಸ ಬೇಕೆಂದು ಅಧಿಕಾರಿಗಳಿಗೆ ಸೂಚನೆ ಕೊಡುತ್ತೇನೆ.

ಅಧ್ಯಕ್ಷರು.—ತಡೆಹಿಡಿಯಲಾದ ಪ್ರಶ್ನೆಗಳು.

ಪ್ರಶ್ನೆ ನಂ. ೭೭ (೨೭೦)
ಪ್ರಶ್ನೆ ನಂ. ೭೦ (೨೨೧)
ಪ್ರಶ್ನೆ ನಂ. ೧೯೫ (೧೮೮)
ಪ್ರಶ್ನೆ ನಂ. ೪೩೫ (೧೩೯೫)
} ಸಂಬಂಧಿಸಿದ ಮಾನ್ಯ ಸದಸ್ಯರುಗಳು ಗೈರುಹಾಜರಾಗಿದ್ದರು.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಕಾಳಿ ಜಲವಿದ್ಯುತ್ ಯೋಜನೆ ಬಗ್ಗೆ

೧೪೯೨. ಶ್ರೀ ಪ್ರಭಾಕರ್ ಎಸ್. ರಾಣೆ (ಕಾರವಾರ),—ಮಾನ್ಯ ಕೈಗಾರಿಕೆ, ಇಂಧನ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ಕಾಳಿ ವಿದ್ಯುತ್‌ಯೋಜನೆಯ ಕದ್ರಾ ಡ್ಯಾಮ್‌ನಡಿಯಲ್ಲಿ ಜಮೀನು ಮುಳುಗಡೆಯಾಗುವ ಕುಟುಂಬಗಳ ಸಂಖ್ಯೆ ಎಷ್ಟು?

ಆ) ಈ ಜನರಿಗೆ ಪುನರ್ವಸತಿ ವ್ಯವಸ್ಥೆ ಮಾಡಲಾಗಿದೆಯೇ, ಹಾಗಿದ್ದರೆ ಯಾವ ಪ್ರದೇಶದಲ್ಲಿ ಈ ವ್ಯವಸ್ಥೆಯನ್ನು ಮಾಡಲಾಗಿದೆ ಮತ್ತು ಅಲ್ಲಿ ಕಲ್ಪಿಸುವ ಸೌಕರ್ಯವೇನು?

ಇ) ಈ ಯೋಜನೆಯಿಂದ ನಿರಾಶ್ರಿತರಾಗಿರುವ ಕುಟುಂಬಗಳಲ್ಲಿಯ ನಿರುದ್ಯೋಗಿಗಳಿಗೆ ಕರ್ನಾಟಕ ವಿದ್ಯುತ್ ನಿಗಮದಲ್ಲಿ ಮತ್ತು ನಿರ್ಮಾಣ ಕಾರ್ಯ ಕೆ ಗೊಂಡಿರುವ ವಿವಿಧ ಗುತ್ತಿಗೆದಾರರಲ್ಲಿ ಎಷ್ಟು ಜನರಿಗೆ ಉದ್ಯೋಗ ಅವಕಾಶ ಕಲ್ಪಿಸಲಾಗಿದೆ.

ಶ್ರೀ ಎಸ್. ಎಂ. ಯಾಹ್ಯಾ (ಕೈಗಾರಿಕೆ, ಇಂಧನ ಮತ್ತು ವಕ್ಫ್ ಸಚಿವರು).—

ಅ) ೩೨೫ ಕುಟುಂಬಗಳು ಕಾಳಿ ಯೋಜನೆಯ ಕದ್ರಾ ಅಣೆಕಟ್ಟನ್ನು ನಿರ್ಮಿಸುವುದರಿಂದ ಭೂಮಿಯನ್ನು ಕಳೆದುಕೊಳ್ಳುತ್ತಾರೆ.

ಆ) ಪುನರ್ವಸತಿ ಕೇಂದ್ರ ನಿರ್ಮಿಸುವ ಕಾರ್ಯವು ಪ್ರಗತಿಯಲ್ಲಿದೆ. ಕದ್ರಾ ಮತ್ತು ಕೊಡಸಳ್ಳಿ ಯೋಜನೆಯಲ್ಲಿ ತೊಂದರೆಯೊಳಗಾಗುವವರಿಗೆ ಮತ್ತು ಅದರಲ್ಲಿ ಯಾರು ವ್ಯವಸಾಯ ಭೂಮಿ ಬೇಕೆಂದು ಕೇಳಿರುವರೋ ಅವರಿಗೆ ಅಂಕೋಲ ತಾಲ್ಲೂಕಿನ ಹುಳವಳ್ಳಿ, ಕಲ್ಲೇಶ್ವರ, ಹೆಗ್ಗೇರಾ ಮತ್ತು ಡೊಂಗ್ರಿ ಹಳ್ಳಿಗಳಲ್ಲಿ ಪುನರ್ವಸತಿ ಕೇಂದ್ರವನ್ನು ನಿರ್ಮಿಸಲಾಗುವುದು. ಪುನರ್ವಸತಿ ಕೇಂದ್ರದಲ್ಲಿ ಈ ಕೆಳಗೆ ತಿಳಿಸಿರುವ ಸೌಲಭ್ಯವನ್ನು ಒದಗಿಸಲಾಗುವುದು (೧/ ವಸತಿ ನಿವೇಶನ (೨) ವ್ಯವಸಾಯ ಜಮೀನು (೩) ನೀರು ಸರಬರಾಜು ಮತ್ತು ವಿದ್ಯುಚ್ಛಕ್ತಿ (೪) ಕಾಲೋನಿ ರಸ್ತೆ (೫) ಸಾರ್ವಜನಿಕ ಉಪಯೋಗ ಕಟ್ಟಡಗಳು ಅಂದರೆ ಶಾಲೆ, ಆಸ್ಪತ್ರೆ, ಆಂಚೆ ಕಛೇರಿ ಮತ್ತು ಅಧಿಕಾರಿಗೆ ವಸತಿ, ಧಾರ್ಮಿಕ ಪೂಜಾ ಸ್ಥಳಗಳು ಪಂಚಾಯತಿ, ಕಟ್ಟಡ ಮುಂತಾದವು (೬) ಜನರನ್ನು ಸ್ಥಳಾಂತರಿಸುವಾಗ ತಾತ್ಕಾಲಿಕ ಕೆಡ್ಡಿನ ನಿರ್ಮಾಣ (೭) ತೊಂದರೆಗೊಳಗಾದವರ ಸಾಮಾನು ಸರಂಜಾಮುಗಳನ್ನು ಉಚಿತವಾಗಿ ಸಾಗಿಸಲು ಸೌಕರ್ಯ ಕೊಡಲಾಗುವುದು (೮) ವ್ಯವಸಾಯ ಭೂಮಿ ಯನ್ನು ತಲುಪಲು ದಾರಿಯನ್ನು ನಿರ್ಮಿಸಲಾಗುವುದು.

ಇ) ಸಧ್ಯಕ್ಕೆ ನಾಲ್ಕು ಜನರು ಮಾತ್ರ ಗುತ್ತಿಗೆದಾರರ ಹತ್ತಿರ ಕೆಲಸ ಮಾಡುತ್ತಿರುವುದು.